



ಅರುಣ ಪಿ. ಭಟ್ಟ

# ವಾರಭವಿಷ್ಯ: 24.08.2023ರಿಂದ 30.08.2023ವರೆಗೆ



**ಮೇಷ**

ನಿಮ್ಮ ಕೆಲಸದಿಂದ ವಿಶ್ವಾಸಾರ್ಹತೆ ಹಾಗೂ ಪ್ರತಿಭೆ ಹೆಚ್ಚಾಗುತ್ತದೆ. ಕೆಲವರು ನಿಮ್ಮನ್ನು ಅವಮಾನಕ್ಕೆ ಗುರಿ ಮಾಡಲಿದ್ದಾರೆ. ವಾರದ ಅಂತ್ಯಕ್ಕೆ ಸಂತೋಷವಾಗಿ ಸಮಯ ಕಳೆಯಲಿದ್ದೀರಿ. ನಿಮ್ಮ ಕೆಲಸದ ಜೊತೆಜೊತೆಗೆ ಆಹಾರ ಪಥ್ಯದ ಬಗ್ಗೆಯೂ ಕಾಳಜಿ ತೆಗೆದುಕೊಳ್ಳುತ್ತೀರಿ. ಸಮಯವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಲ್ಲಿ ಯಶಸ್ಸು ಕಾಣುತ್ತೀರಿ. ಶುಭದಿನ 25. ಶ್ರೀವೆಂಕಟೇಶ್ವರ ಸ್ತೋತ್ರ ಪಠಿಸಿರಿ.



**ವೃಷಭ**

ನಿಮ್ಮ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವವರ ಸಂಖ್ಯೆ ಹೆಚ್ಚಾಗುತ್ತದೆ. ಕೋರ್ಟ್ ಕೇಸುಗಳಲ್ಲಿ ಸಮಸ್ಯೆಗಳನ್ನು ಎದುರಿಸುತ್ತೀರಿ. ವಿರೋಧಿ ಪಾಳಯದ ಪಿತೂರಿಯಿಂದ ಹಿನ್ನಡೆ ಅನುಭವಿಸಬೇಕಾಗುತ್ತದೆ. ವಾತಾವರಣದಲ್ಲಿನ ಬದಲಾವಣೆಯಿಂದ ದೈಹಿಕವಾಗಿ ಅನಾರೋಗ್ಯ ಕಾಡಬಹುದು. ಜೊತೆಗೆ ಇರುವವರೇ ಕೆಲವು ವಿಚಾರಗಳಲ್ಲಿ ನಿಮ್ಮನ್ನು ನಿಂದಿಸುವ ಸಾಧ್ಯತೆ ಇದೆ. ಶುಭದಿನ 26. ಕಾಲಭೈರವನ ಸೇವೆ ಮಾಡಿರಿ.



**ಮಿಥುನ**

ವಾರದ ಆರಂಭದಿಂದಲೇ ಹಲವು ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕಾಗುತ್ತದೆ. ಸಂಬಂಧಿಕರ ಜೊತೆಗೆ ಉತ್ತಮ ಸಮಯ ಕಳೆಯುವ ಸಾಧ್ಯತೆ ಇದೆ. ವ್ಯವಹಾರದಲ್ಲಿ ಎಚ್ಚರಿಕೆ ಇರಲಿ. ಈ ವಾರ ಸ್ವಲ್ಪ ಹೆಚ್ಚೇ ಹಣ ಖರ್ಚು ಮಾಡಬೇಕಾಗುತ್ತದೆ. ವ್ಯವಹಾರಗಳಲ್ಲಿ ನಿಮಗೆ ಅನುಕೂಲಕರ ಸನ್ನಿವೇಶ ಇರುತ್ತದೆ. ಆಪ್ತರೊಂದಿಗೆ ಮನಸ್ತಾಪವಾಗುವ ಸಾಧ್ಯತೆ ಇದೆ. ಶುಭದಿನ 27. ಈಶ್ವರನಿಗೆ ರುದ್ರಾಭಿಷೇಕ ಮಾಡಿಸಿ.



**ಕಟಕ**

ಹೊಸ ಉತ್ಪನ್ನಗಳನ್ನು ಮಾರಾಟ ಮಾಡಲು ಸಕಾಲ. ಆದಾಯವೂ ಉತ್ತಮವಾಗಿರುತ್ತದೆ. ಮಕ್ಕಳ ಮದುವೆ ವಿಚಾರವಾಗಿ ಸಂಬಂಧಿಕರ ಜೊತೆಗೆ ಮಾತುಕತೆ ನಡೆಸಲಿದ್ದೀರಿ. ತುರ್ತು ಕೆಲಸಗಳನ್ನು ಪೂರ್ಣಗೊಳಿಸುವಲ್ಲಿ ನಿಮ್ಮ ಗಮನ ಕೇಂದ್ರೀಕೃತವಾಗಿರುತ್ತದೆ. ಇದಕ್ಕಾಗಿ ಕೆಲವು ಸಂಸ್ಥೆ ಅಥವಾ ವ್ಯಕ್ತಿಗಳ ಸಹಾಯ ಪಡೆಯುವ ಸಾಧ್ಯತೆ ಇದೆ. ಶುಭದಿನ 28. ಶಿವಕವಚ ಪಠಣ ಮಾಡಿರಿ.



**ಸಿಂಹ**

ವಾರದ ಶುರುವಿನಿಂದಲೇ ಕೆಲಸಕ್ಕೆ ವೇಗ ನೀಡಲು ಬಹಳ ಪ್ರಯತ್ನ ಮಾಡುತ್ತೀರಿ. ನಿಮ್ಮ ಕೆಲಸ ಕಾರ್ಯಗಳಿಗೆ ಬೇಕಾದ ಮಾಹಿತಿ ಕಲೆ ಹಾಕುತ್ತೀರಿ. ಈ ಅವಧಿಯಲ್ಲಿ ನಿಮ್ಮ ಆರೋಗ್ಯವು ಉತ್ತಮವಾಗಿ ಇರುತ್ತದೆ. ವಾರಾಂತ್ಯದಲ್ಲಿ ವ್ಯವಹಾರ ಲಾಭದಾಯಕವಾಗಿ ಇರುತ್ತದೆ. ನಿಮ್ಮ ಜೀವನ ಶೈಲಿ ಗುಣಮಟ್ಟ ಹೆಚ್ಚಿಸಿಕೊಳ್ಳಲು ಶ್ರಮವನ್ನು ಹೆಚ್ಚು ಹಾಕಲಿದ್ದೀರಿ. ಶುಭದಿನ 29. ಲಿಂಗಾಷ್ಟಕ ಪಠಣ ಮಾಡಿರಿ.



**ಕನ್ಯಾ**

ಉದ್ಯೋಗಸ್ಥರಿಗೆ ಉದ್ಯೋಗ ಸ್ಥಳದಲ್ಲಿ ಉದ್ವಿಗ್ನದ ಸನ್ನಿವೇಶ ಎದುರಾಗುತ್ತದೆ. ಈ ಅವಧಿಯಲ್ಲಿ ಆರೋಗ್ಯ ಸಮಸ್ಯೆಗಳು ಎದುರಾಗಬಹುದು. ವಾರದ ದ್ವಿತೀಯಾರ್ಧದಲ್ಲಿ ನಿಮ್ಮ ಬಹುತೇಕ ಸಮಸ್ಯೆಗಳಿಗೆ ಪರಿಹಾರಗಳು ದೊರೆಯುತ್ತವೆ. ವಿರಾಮಕ್ಕೆ ನಿಮ್ಮದೇ ಸಮಯ ದೊರೆಯುತ್ತದೆ. ವಾರದ ಅಂತ್ಯಕ್ಕೆ ಸರಿಯುತ್ತಾ ಆದಾಯದಲ್ಲಿ ಕೂಡ ಹೆಚ್ಚಳ ಆಗುತ್ತದೆ. ಶುಭದಿನ 30. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




**ತುಲಾ**

ಈ ವಾರ ವೈಯಕ್ತಿಕ ಸಮಸ್ಯೆಗಳ ಬಗ್ಗೆ ಹೆಚ್ಚಿನ ಎಚ್ಚರಿಕೆ ವಹಿಸಿ. ಸಣ್ಣ ವಿಚಾರ ಕೂಡ ದೊಡ್ಡ ಬಿಕ್ಕಟ್ಟಾಗಿ ಎದ್ದು ನಿಲ್ಲುವ ಸಾಧ್ಯತೆ ಇದೆ. ವ್ಯಾಪಾರ ಮತ್ತಷ್ಟು ಪರಿಣಾಮಕಾರಿಯಾಗಿ ಮಾಡುವುದಕ್ಕೆ ಅವಕಾಶ ದೊರೆಯುತ್ತದೆ. ವಾರದ ಅಂತ್ಯಕ್ಕೆ ಸರಿಯುತ್ತಾ ಉತ್ತಮ ಹಾಗೂ ಅನುಕೂಲಕರವಾದ ಫಲಿತಾಂಶ ದೊರೆಯಲಿದೆ. ಆರೋಗ್ಯವು ಉತ್ತಮವಾಗಿರುತ್ತದೆ. ಶುಭದಿನ 26. ಸೌಂದರ್ಯ ಲಹರಿ ಪಠಿಸಿರಿ.



**ವೃಶ್ಚಿಕ**

ವಾರದ ಮೊದಲ ಭಾಗದಿಂದಲೇ ಆರೋಗ್ಯವಾಗಿ ಇರುತ್ತೀರಿ. ರಾಜಕಾರಣಿಗಳು ಹೆಚ್ಚಿನ ಜವಾಬ್ದಾರಿ ವಹಿಸಿಕೊಳ್ಳಬೇಕಾಗುತ್ತದೆ. ನೀವು ಖರೀದಿ ಮಾಡಬೇಕು ಎಂದ ಭೂಮಿಯೊಂದರ ಪರಿಶೀಲನೆ ನಡೆಸುವ ಸಾಧ್ಯತೆ ಇದೆ. ವಾರದ ಅಂತ್ಯಕ್ಕೆ ವರ್ಗಾವಣೆ ಆಗುವ ಸಾಧ್ಯತೆ ಇದೆ. ಈ ಅವಧಿಯಲ್ಲಿ ನಿಮ್ಮ ಕೆಲಸವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಮಾಡಲಿದ್ದೀರಿ. ಶುಭದಿನ 29. ಲಕ್ಷ್ಮೀ ನಾರಾಯಣ ಹೃದಯ ಪಠಿಸಿರಿ.



**ಧನಸ್ಸು**

ನಿಮ್ಮ ಕಾರ್ಯಗಳನ್ನು ವೇಗವಾಗಿ ಮಾಡಲಿದ್ದೀರಿ. ಹೆಚ್ಚು ಹಣ ಖರ್ಚು ಮಾಡಬೇಕಾಗುತ್ತದೆ. ನಿಮ್ಮ ಮನಸಿನಲ್ಲಿ ಇರುವ ವಿಚಾರವನ್ನು ನೇರವಾಗಿ ಹೇಳಲು ಪ್ರಯತ್ನಿಸಿ. ಒಬ್ಬರು ಹೇಳುವುದನ್ನು ಮತ್ತೊಬ್ಬರು ಕೇಳಿಸಿಕೊಳ್ಳಲು ಸಿದ್ಧರಿಲ್ಲದ ಕಾರಣ ಸಮಸ್ಯೆ ದೊಡ್ಡದಾಗುತ್ತದೆ. ವಾರದ ದ್ವಿತೀಯಾರ್ಧದಿಂದ ನಿಮ್ಮ ಆರೋಗ್ಯ ಉತ್ತಮವಾಗಿರುತ್ತದೆ. ಶುಭದಿನ 28. ವಿಷ್ಣು ಸಹಸ್ರನಾಮ ಓದಿರಿ.



**ಮಕರ**

ಈ ವಾರ ಬಹಳ ಸಂತೋಷವಾಗಿ ಇರುತ್ತೀರಿ. ಆದಾಯಕ್ಕೆ ಉತ್ತಮ ಅವಕಾಶ ಇದೆ. ವಿದ್ಯಾರ್ಥಿಗಳಿಗೆ ಯಶಸ್ಸು ಪಡೆಯುವ ಅವಕಾಶಗಳು ದೊರೆಯಲಿವೆ. ಮದುವೆಯ ವಿಚಾರವನ್ನು ಅಂತಿಮಗೊಳಿಸುವ ಅವಕಾಶ ಇದೆ. ವಾರದ ದ್ವಿತೀಯಾರ್ಧದಲ್ಲಿ ಕಾಲು ನೋವಿನ ಸಮಸ್ಯೆ ಕಾಡಬಹುದು. ವಾರದ ಅಂತ್ಯಕ್ಕೆ ಸರಿಯುತ್ತಾ ಆರೋಗ್ಯ ಸುಧಾರಿಸುತ್ತದೆ. ಶುಭದಿನ 27. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.



**ಕುಂಭ**

ವಾರದ ಶುರುವಿನಿಂದಲೇ ಉದ್ಯೋಗದಲ್ಲಿ ಅದ್ಭುತವಾದ ಸಾಧನೆ ಮಾಡುವ ಅವಕಾಶಗಳಿವೆ. ನಿಮ್ಮ ಪಾಲಿಗೆ ದೊರೆಯುವ ಅವಕಾಶಗಳನ್ನು ಬಹಳ ಚೆನ್ನಾಗಿ ಬಳಸಿಕೊಳ್ಳಲಿದ್ದೀರಿ. ವಾರದ ಆರಂಭದಲ್ಲಿ ಆರೋಗ್ಯ ಉತ್ತಮವಾಗಿ ಇರುತ್ತದೆ. ಸಾಮಾಜಿಕವಾಗಿ ಗೌರವ ಮನ್ನಣೆಗಳನ್ನು ಪಡೆಯಲಿದ್ದೀರಿ. ವೈದ್ಯರ ಭೇಟಿ ಮಾಡಬೇಕಾಗುತ್ತದೆ. ಶುಭದಿನ 25. ಸುಬ್ರಮಣ್ಯ ಜಪ ಮಾಡಿರಿ.



**ಮೀನ**

ಸಣ್ಣ ಪ್ರವಾಸ ಮಾಡಬೇಕಾಗಿ ಬರುತ್ತದೆ. ಸಂಸ್ಥೆಯೊಂದರ ಜತೆ ಮಹತ್ತರವಾದ ಒಪ್ಪಂದವೊಂದಕ್ಕೆ ಸಹಿ ಹಾಕುವ ಸಾಧ್ಯತೆ ಇದೆ. ವ್ಯಾಸಂಗದಲ್ಲಿ ವಿದ್ಯಾರ್ಥಿಗಳಿಗೆ ಪ್ರಗತಿ ಇದೆ. ವಾರದ ಅಂತ್ಯಕ್ಕೆ ಸರಿಯುತ್ತಾ ಆದಾಯದಲ್ಲಿ ಹೆಚ್ಚಳ ಆಗುತ್ತದೆ. ಇದರಿಂದ ಸಾಮಾಜಿಕ ಹಾಗೂ ಆರ್ಥಿಕ ಸ್ಥಾನಮಾನ ಹೆಚ್ಚಾಗಲಿದೆ. ವೈಯಕ್ತಿಕ ಸಂಬಂಧದಲ್ಲಿ ಮಧುರವಾಗಿರುತ್ತದೆ. ಶುಭದಿನ 28. ಶ್ರೀ ದುರ್ಗಾ ಆರಾಧನೆ ಮಾಡಿರಿ.